ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. ☎ 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರಿಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ 90 ದಿನಗಳವರೆಗೆ	6	6.5
* 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ		

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ
ವ್ಯವಸ್ಥಾಪಕ ಸಂಪಾದಕ :ಎಸ್.ಎನ್.ಮಂಜುನಾಥದತ್ತ

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner

ಉದ್ದದ ಉಗುರು ಬೆಳೆಸಿ ಗಿನ್ನಿಸ್ ದಾಖಲೆ ಬರೆದ ಅಮೆರಿಕ ಮಹಿಳೆ

ಅಮೆರಿಕ ಮೂಲದ ಅಯಾನ್ ವಿಲಿಯಮ್ಸ್ ಎಂಬಾಕೆ ಕೈ ಉಗುರುಗಳನ್ನು ಉದ್ದವಾಗಿ ಬೆಳೆಸುವ ಮೂಲಕ ಗಿನ್ನಿಸ್ ದಾಖಲೆ ಬರೆದಿದ್ದಾರೆ. ಅಯಾನ್ ಕೈಯಲ್ಲಿ ಬೆಳೆದಿರುವ ಉಗುರಿನ ಉದ್ದ ಎಷ್ಟಿದೆ ಎಂದರೆ ಬರೋಬ್ಬರಿ 2.27 ಅಡಿಯಷ್ಟಿವೆ. ಈ ಉಗುರುಗಳನ್ನು ಬೆಳೆಸಲು ಅವರು ತೆಗೆದುಕೊಂಡ ಸಮಯ 23 ವರ್ಷಗಳ ಕಾಲ. ವಿಶೇಷ ಎಂದರೆ ಈಕೆಯ ಉಗುರುಗಳಿಗೆ ನೈಲ್ ಪಾಲೀಷ್ ಮಾಡಲು 20 ಗಂಟೆಗಳ ಸಮಯ ಬೇಕಾಗುತ್ತದಂತೆ!

ಗೌರಿ ಹತ್ಯೆ ಸುಳಿವು ಬಹಿರಂಗಕ್ಕೆ ಸಚಿವ ರೆಡ್ಡಿ ನಕಾರ

ಪತ್ರಕರ್ತೆ, ಹೋರಾಟಗಾರ್ತಿ ಗೌರಿ ಲಂಕೇಶ್ ಹತ್ಯೆ ಪ್ರಕರಣದಲ್ಲಿ ಸಿಕ್ಕಿರುವ ಸುಳಿವುಗಳನ್ನು ಸದ್ಯಕ್ಕೆ ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದು ಗೃಹ ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ. ತನಿಖಾ ದಳಕ್ಕೆ ಲಭ್ಯವಾಗಿರುವ ಸುಳಿವುಗಳನ್ನು ಬಹಿರಂಗಪಡಿಸಿದರೆ ಹಂತಕರು ತಪ್ಪಿಸಿಕೊಳ್ಳುವ ಸಾಧ್ಯತೆ ಇದೆ. ಆದ್ದರಿಂದ ಅದನ್ನು ಈಗಲೇ ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದಿದ್ದಾರೆ.

ದಾವೂದ್‌ಗೆ ಬ್ರಿಟನ್ ಶಾಕ್ : 45 ಸಾವಿರ ಕೋ. ರೂ. ಮೌಲ್ಯದ ಆಸ್ತಿ ವಶ

ಭಾರತಕ್ಕೆ ಬೇಕಾಗಿರುವ 'ಮೋಸ್ಟ್ ವಾಂಟೆಡ್' ಭೂಗತ ಪಾತಕಿ ದಾವೂದ್ ಇಬ್ರಾಹಿಂಗೆ ಸೇರಿದ 45 ಸಾವಿರ ಕೋಟಿ ರೂ. ಮೌಲ್ಯದ ಆಸ್ತಿ-ಪಾಸ್ತಿಯನ್ನು ಬ್ರಿಟನ್ ಸರ್ಕಾರ ವಶಪಡಿಸಿಕೊಳ್ಳುವ ಮೂಲಕ ಭೂಗತ ಪಾತಕಿಗೆ ದೊಡ್ಡ ಶಾಕ್ ನೀಡಿದೆ. ಭಾರತ ಸರ್ಕಾರದ ಮನವಿಯ ಮೇರೆಗೆ ಬ್ರಿಟನ್ ಸರ್ಕಾರ 6.7 ಬಿಲಿಯನ್ ಡಾಲರ್ ಮೊತ್ತದ ಆಸ್ತಿಯನ್ನು ವಶಕ್ಕೆ ತೆಗೆದುಕೊಂಡಿದೆ. ಈ ಮೂಲಕ ಭಾರತಕ್ಕೆ ದೊಡ್ಡ ರಾಜತಾಂತ್ರಿಕ ಗೆಲುವು ಸಿಕ್ಕಿದೆ.

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 40 ಸಂಚಿಕೆ :308 ಗುರುವಾರ ಸೆ.14, 2017 ದೂರವಾಣಿ : 268494 ಪುಟ-4 ರೂ.2-00 NO. HSN-761/ 2015-17

ಕಾವೇರಿ ವಿವಾದ : ಸುಪ್ರೀಂನಲ್ಲಿ ಮತ್ತೆ ವಿಚಾರಣೆ

ಕರ್ನಾಟಕ-ತಮಿಳುನಾಡು ವಾದ ಮಂಡನೆ

ನವದೆಹಲಿ : ಕರ್ನಾಟಕ ಮತ್ತು ತಮಿಳುನಾಡು ನಡುವೆ ಶತಮಾನದಿಂದಲೂ ಉದ್ಭವಿಸಿರುವ ಕಾವೇರಿ ಜಲ ವಿವಾದ ಇತ್ಯರ್ಥಕ್ಕಾಗಿ ಸುಪ್ರೀಂಕೋರ್ಟ್‌ನಲ್ಲಿ ಬುಧವಾರದಿಂದ ಮತ್ತೆ ವಿಚಾರಣೆ ಮುಂದುವರಿದಿದೆ. ಉಭಯ ರಾಜ್ಯಗಳು ಬುಧವಾರ ತಮ್ಮ ವಾದ-ಪ್ರತಿವಾದಗಳನ್ನು ಮಂಡಿಸಿದವು.

ಕಾವೇರಿ ಜಲ ವಿವಾದ ನ್ಯಾಯಮಂಡಳಿ (ಸಿಡಬ್ಲ್ಯುಡಿಟಿ) 2007ರಲ್ಲಿ ನೀಡಿದ ಅಂತಿಮ ತೀರ್ಪಿನ ವಿರುದ್ಧ ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳು ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿಗಳನ್ನು ಸಲ್ಲಿಸಿದ್ದು, ಜುಲೈ 11ರಿಂದ ಅಂತಿಮ ವಿಚಾರಣೆ ಆರಂಭಿಸಿದೆ.

ಆಗಿನ ನ್ಯಾಯಮೂರ್ತಿ ದೀಪಕ್ ಮಿಶ್ರಾ(ಈಗ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ) ನೇತೃತ್ವದ ಪೀಠವು ಈ ಹಿಂದೆ ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಿ, ಮುಂದಿನ ಆದೇಶದವರೆಗೆ ತಮಿಳುನಾಡಿಗೆ ಪ್ರತಿದಿನ 2,000 ಕ್ಯೂಸೆಕ್ಸ್ ನೀರು ಹರಿಸುವಂತೆ ತಿಳಿಸಿದ್ದರು. ಬುಧವಾರ ಮುಂದುವರಿದ ವಿಚಾರಣೆ ವೇಳೆ ತಮಿಳುನಾಡು ಪರ ವಕೀಲರು ಕಾವೇರಿ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗಿದ್ದು, ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟದಲ್ಲಿ ಏರಿಕೆಯಾಗಿದೆ. ಆದ್ದರಿಂದ ರಾಜ್ಯ ಮತ್ತಷ್ಟು ನೀರು ಹರಿಸಲು ನಿರ್ದೇಶನ ನೀಡಬೇಕೆಂದು ಕೋರಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕರ್ನಾಟಕದ ವಕೀಲರು, ಕಳೆದ ಮೂರು ವರ್ಷಗಳಿಂದ ಮುಂಗಾರು ಮಳೆ ವೈಫಲ್ಯದಿಂದ ಕಾವೇರಿ ಕೊಳ್ಳದ ಪ್ರದೇಶಗಳಲ್ಲಿ ಬರಗಾಲ ಪರಿಸ್ಥಿತಿ ಉಂಟಾಗಿದೆ. ಮಳೆಯಾಗಿದ್ದರೂ, ನಿರೀಕ್ಷಿತ ಮಟ್ಟದಲ್ಲಿ ಜಲಾಶಯ ಭರ್ತಿಯಾಗಿಲ್ಲ. ಹೀಗಾಗಿ ತಮಿಳುನಾಡಿಗೆ ಮತ್ತೆ ನೀರು ಹರಿಸಲು ಸಾಧ್ಯವಿಲ್ಲ ಎಂದು ಸಮರ್ಥ ಪ್ರತಿವಾದ ಮಂಡಿಸಿದರು. ಎರಡೂ ರಾಜ್ಯಗಳ ವಕೀಲರ ವಾದ-ಪ್ರತಿವಾದಗಳನ್ನು ಪೀಠ ಆಲಿಸಿತು.

ಎರಡೂ ರಾಜ್ಯಗಳ ನಡುವೆ ಕಾವೇರಿ ಜಲ ವಿವಾದದ ವೇಳೆ ಉಂಟಾಗಿರುವ ಭಾರೀ ನಷ್ಟಕ್ಕಾಗಿ ಪರಿಹಾರ ನೀಡಬೇಕೆಂದು ಕೋರಿ ಕರ್ನಾಟಕ ಮತ್ತು ತಮಿಳುನಾಡು ಸರ್ಕಾರಗಳು ಸಲ್ಲಿಸಿದ್ದ ಮನವಿಯನ್ನು ಸುಪ್ರೀಂ ಕೋರ್ಟ್ ಈ ವರ್ಷ ಜನವರಿಯಲ್ಲಿ ವಜಾಗೊಳಿಸಿತ್ತು. ಜನವರಿ 9ರಂದು ತಮಿಳುನಾಡು ಸರ್ಕಾರವು ಸರ್ವೋಚ್ಚ ನ್ಯಾಯಾಲಯದಲ್ಲಿ ಮನವಿ ಸಲ್ಲಿಸಿ, ರಾಜ್ಯಕ್ಕೆ ಕರ್ನಾಟಕ ಸಮರ್ಪಕವಾಗಿ ನೀರು ಹರಿಸದ ಕಾರಣ ಆ ರಾಜ್ಯದಿಂದ 2,480 ಕೋಟಿ ರೂ.ಗಳ ಪರಿಹಾರ ಒದಗಿಸಿಕೊಡುವಂತೆ ಕೋರಿತ್ತು.

ಕಳೆದ ವರ್ಷ ಡಿ.9ರಂದು ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳು ಕಾವೇರಿ ನ್ಯಾಯಾಧೀಕರಣದ ಅಂತಿಮ ತೀರ್ಪನ್ನು ಪ್ರಶ್ನಿಸಿ ಸಲ್ಲಿಸಲಾದ ಮೇಲ್ಮನವಿಗಳನ್ನು ವಿಚಾರಣೆಗಾಗಿ ಅಂಗೀಕರಿಸಲಾಗಿತ್ತು.

ಸಾಲ ಬಾಧೆ : ರೈತ ಆತ್ಮಹತ್ಯೆ

ಹಾಸನ : ತಾಲ್ಲೂಕಿನ ಸೊಪ್ಪಿನಹಳ್ಳಿಯಲ್ಲಿ ಸಾಲಭಾದೆಯಿಂದ ಮನನೊಂದ ರೈತನೊಬ್ಬ ಮಂಗಳವಾರ ಸಂಜೆ ತನ್ನ ಮನೆಯಲ್ಲೇ ನೇಣು ಬಿಗಿದುಕೊಂಡು ಸಾವಿಗೆ ಶರಣಾಗಿರುವ ಪ್ರಕರಣ ನಡೆದಿದೆ.

ಸೊಪ್ಪಿನಹಳ್ಳಿಯ ರಂಗಸ್ವಾಮಿ ಅವರ ಮಗ ದೇವರಾಜು(45) ಆತ್ಮಹತ್ಯೆ ಮಾಡಿಕೊಂಡಿರುವ ರೈತ. ನಿಟ್ಟೂರಿನ ಕೃಷಿ ಪತ್ತಿನ ಸಹಕಾರಿ ಬ್ಯಾಂಕ್‌ನಲ್ಲಿ 30 ಸಾವಿರ ರೂ., ಕಾವೇರಿ ಗ್ರಾಮೀಣ ಬ್ಯಾಂಕ್‌ನಲ್ಲಿ 15 ಸಾವಿರ ರೂ. ಹಾಗೂ ಸುಮಾರು 2 ಲಕ್ಷ ರೂ.ಗೂ ಹೆಚ್ಚು ಹಣವನ್ನು ಅವರು ಕೈ ಸಾಲ ಮಾಡಿಕೊಂಡಿದ್ದರೆಂದು ತಿಳಿಸಲಾಗಿದೆ.

ಸಕಾಲಕ್ಕೆ ಮಳೆ ಬೀಳದೆ, ಮಾಡಿದ ಎಲ್ಲಾ ಕೃಷಿ ಬೆಳೆಗಳು ಕೈ ಹಿಡಿಯಲಿಲ್ಲ. ನೀರಾವರಿ ಬಾವಿಗಳು ನೀರಿಲ್ಲದೆ ಬತ್ತಿ ಹೋದ ಪರಿಣಾಮ ಮಾನಸಿಕ ನೆಮ್ಮದಿ ಸಿಗಲಿಲ್ಲ. ಕೊನೆಗೆ ಬೇಸತ್ತು ಆತ್ಮಹತ್ಯೆ ಹಾದಿ ಹಿಡಿದರೆಂದು ಅವರ ಸಂಬಂಧಿಕರು ತಿಳಿಸಿದ್ದಾರೆ. ರೈತ ದೇವರಾಜು ಅವರು ಪತ್ನಿ, ಪುತ್ರಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ.

ಮ್ಯಾಕ್ಸಿಕ್ಯಾಬ್ ಮಾಲೀಕರು, ಚಾಲಕರಿಗೆ ತೊಂದರೆ ಬೇಡ

ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು ಅಧಿಕಾರಿಗಳಿಗೆ ಸೂಚನೆ



ಡಿ.ಸಿ. ಕಚೇರಿ ಮುಂದೆ ಪ್ರತಿಭಟನೆ ನಡೆಸಿದ ಮ್ಯಾಕ್ಸಿಕ್ಯಾಬ್ ಚಾಲಕರು

ಹಾಸನ : ಮ್ಯಾಕ್ಸಿಕ್ಯಾಬ್ ಮಾಲೀಕರು ಹಾಗೂ ಚಾಲಕರಿಗೆ ತೊಂದರೆ ನೀಡಕೂಡದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು, ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳಿಗೆ ಮತ್ತು ಆರ್.ಟಿ.ಓ. ಇಲಾಖೆ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದ್ದಾರೆ.

ಬುಧವಾರ ರಾತ್ರಿ ಪ್ರವಾಸಿ ಮಂದಿರದಲ್ಲಿ ಮ್ಯಾಕ್ಸಿಕ್ಯಾಬ್ ಮಾಲೀಕರು ಹಾಗೂ ಚಾಲಕರು, ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು ಅವರನ್ನು ಭೇಟಿಯಾಗಿ ತಮಗಾಗುತ್ತಿರುವ ತೊಂದರೆಯನ್ನು ವಿವರಿಸಿದರು.

ಈ ಸಂದರ್ಭದಲ್ಲಿ ಚಾಲಕರು, ಸಾರಿಗೆ ಸಿಬ್ಬಂದಿಯಿಂದ ಕಿರುಕುಳವಾಗುತ್ತಿದೆ. ಅಲ್ಲದೆ ಮ್ಯಾಕ್ಸಿಕ್ಯಾಬ್ ಸಂಚಾರಕ್ಕೂ ತೊಂದರೆಯಾಗಿದೆ. ಇದರಿಂದ ತಮ್ಮ ಕುಟುಂಬ ನಿರ್ವಹಣೆಗೂ ಕಷ್ಟವಾಗಿದೆ ಎಂದು ತಮ್ಮ ಅಳಲು ತೋಡಿಕೊಂಡರು.

ಮನವಿ ಸ್ವೀಕರಿಸಿದ ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು ಅವರು, ಸಾರಿಗೆ ಅಧಿಕಾರಿಗಳನ್ನು ಫೋನ್‌ನಲ್ಲಿ ಸಂಪರ್ಕಿಸಿ, ಅನಗತ್ಯವಾಗಿ ಮ್ಯಾಕ್ಸಿಕ್ಯಾಬ್ ಮಾಲೀಕರು ಹಾಗೂ ಚಾಲಕರಿಗೆ ತೊಂದರೆ ನೀಡಕೂಡದು ಎಂದು ಹೇಳಿದರು. ಇದಕ್ಕೆ ಸಂಬಂಧಿಸಿದಂತೆ ಗುರುವಾರ ತಕ್ಷಣ ಸಭೆ ಕರೆದು ಬಗೆಹರಿಸುವಂತೆ ತಿಳಿ ಹೇಳಿದರು.

ಈ ಸಂದರ್ಭದಲ್ಲಿ ಮ್ಯಾಕ್ಸಿಕ್ಯಾಬ್ ಚಾಲಕರು ಮತ್ತು ಮಾಲೀಕರ ಸಂಘದ ಲಕ್ಷ್ಮೀನಾರಾಯಣ್, ರಂಗೇಗೌಡ ಸೇರಿದಂತೆ ಹಲವರು ಹಾಜರಿದ್ದರು.

ಕಾಂಗ್ರೆಸ್ ಮುಖಂಡರಾದ ಜಾವಗಲ್ ಮಂಜುನಾಥ್, ಪಟೇಲ್ ಇನ್ನಿತರರು ಇದ್ದರು.

ಇದಕ್ಕೆ ಮುನ್ನ ಮ್ಯಾಕ್ಸಿಕ್ಯಾಬ್ ಮಾಲೀಕರು ಧರಣಿ ನಡೆಸಿ, ಸಮಸ್ಯೆ ಬಗೆಹರಿಸುವಂತೆ ಕೋರಿದರು.

ರೈಲ್ವೆ ಮೇಲ್ಸೇತುವೆ, ರಿಂಗ್ ರಸ್ತೆಗೆ ಮುಕ್ತಿ ಯಾವಾಗ?

■ ವೆಂಕಟೇಶ್

ಹಾಸನ : ನಗರ ಸೇರಿದಂತೆ ಜಿಲ್ಲೆಯಲ್ಲಿ ಜನರ ಬಹುದಿನಗಳ ಬೇಡಿಕೆಯಾಗಿದ್ದ ಹಲವು ಕೆಲಸಗಳಿಗೆ ಮುಕ್ತಿ ಸಿಕ್ಕಿಲ್ಲ. ಪ್ರಮುಖವಾಗಿ ನಗರದ ಎನ್.ಆರ್. ಸರ್ಕಲ್‌ನಲ್ಲಿ ರೈಲ್ವೆ ಮೇಲ್ಸೇತುವೆ ಆಗಲೇ ಇಲ್ಲ. ರೈಲ್ವೆ ಮೇಲ್ಸೇತುವೆಗೆ ಮುಕ್ತಿ ಯಾವಾಗ? ಇದಂತೂ ಯಾರಿಗೂ ಗೊತ್ತಿಲ್ಲ.

ಚನ್ನಪಟ್ಟಣ ಕೆರೆ ಅಂಗಳದಲ್ಲಿ ಹೊಸ ಬಸ್ ನಿಲ್ದಾಣ ಆರಂಭವಾಗುವ ಹಂತದಲ್ಲೇ ರೈಲ್ವೆ ಮೇಲ್ಸೇತುವೆ ಬಗ್ಗೆ ವಿವಿಧ ಸಂಘಟನೆಗಳು, ಜನರು ಒತ್ತಡ ಹೇರಿದ್ದರು. ಆದರೆ ಇಷ್ಟು ವರ್ಷ ಕಳೆದರೂ ರೈಲ್ವೆ ಮೇಲ್ಸೇತುವೆ ಕಾಮಗಾರಿ ಆರಂಭಿಸುವ ಲಕ್ಷಣ ಕಾಣುತ್ತಲೇ ಇಲ್ಲ.

ಇದಕ್ಕೆ ಸಂಬಂಧಿಸಿದಂತೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅನುದಾನ ಕೂಡ ಮೀಸಲಿರಿಸಿವೆ. ಕೇಂದ್ರ ಸರ್ಕಾರ ಕೂಡ ಈ ವಿಚಾರದಲ್ಲಿ ಸಕಾರಾತ್ಮಕವಾಗಿಯೇ ಪ್ರತಿಕ್ರಿಯಿಸಿದೆ. ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸಚಿವರನ್ನು ಭೇಟಿಯಾಗಿ ಚರ್ಚೆ ಕೂಡ ನಡೆಸಿದ್ದರು.

ಮಾರ್ಚ್ ತಿಂಗಳಿನಲ್ಲಿ ರೈಲ್ವೆ ಮೇಲ್ಸೇತುವೆ ಕಾಮಗಾರಿ ಆರಂಭವಾಗಲಿದೆ ಎಂದು ಹೇಳಲಾಗಿತ್ತು. ಆದರೆ ಸೆಪ್ಟೆಂಬರ್ ತಿಂಗಳಾದರೂ ಕೆಲಸವಿರಲಿ, ರೈಲ್ವೆ ಮೇಲ್ಸೇತುವೆಯ ಕಡತ ಏನಾಗಿದೆ ಎಂಬುದೂ ಗೊತ್ತಾಗಿಲ್ಲ. ಅಧಿಕಾರಿಗಳು ಮಾತ್ರ ಕೆಲಸ ಮುಗಿದೇ ಹೋಯಿತು ಎಂದು ಹೇಳುತ್ತಾರೆ.

ಕಳೆದ 20 ವರ್ಷದಿಂದಲೂ ರಿಂಗ್ ರಸ್ತೆಗೆ ಬೇಡಿಕೆ ಇದೆ. ರಿಂಗ್ ರಸ್ತೆಯಾದರೆ ವಾಹನ ಒತ್ತಡ ಕಡಿಮೆಯಾಗಲಿದೆ. ಇದು ಕೂಡ ಪ್ರಮುಖ ಬೇಡಿಕೆ. ಆದರೆ ರಿಂಗ್ ರಸ್ತೆ ಕೆಲಸವೂ ಕೂಡ ಹಾಗೆಯೇ ಉಳಿಯಿತು. ಈ ಬಗ್ಗೆ ನಾಲ್ಕೈದು ಪ್ರಮುಖ ಸಭೆಗಳೂ ನಡೆದವು. ಆದರೆ ಆಗಿದ್ದಾದರೂ ಏನು?

ಇನ್ನು ಎ.ಪಿ.ಎಂ.ಸಿ. ಬಳಿ 80 ಅಡಿ ರಸ್ತೆ ನಿರ್ಮಾಣಕ್ಕಾಗಿ ಪ್ರಸ್ತಾವನೆ ಇತ್ತು. ಹಬೀಬಿಯಾ ಸಾಮಿಲ್ ಪಕ್ಕದ ರಸ್ತೆ ಹುಣಸಿನಕೆರೆ ರಸ್ತೆ ಮೂಲಕ ರಿಂಗ್ ರಸ್ತೆಗೆ ಸಂಪರ್ಕ ಕಲ್ಪಿಸುತ್ತದೆ. 80 ಅಡಿ ರಸ್ತೆ ಆಗಿದ್ದರೆ ಸಂಚಾರ ಸುಗಮವಾಗುತ್ತಿತ್ತು. ಆದರೆ ಆ ಕೆಲಸವೂ ಆಗಲಿಲ್ಲ.

ನಗರದ 36 ವಾರ್ಡ್‌ಗಳಲ್ಲಿ ಐದಕ್ಕೂ ಹೆಚ್ಚು ವಾರ್ಡುಗಳು ಸ್ಲಂಗಳಾಗಿವೆ. ಪೆನ್‌ಷನ್ ಮೊಹಲ್ಲಾ, ಮೆಹಬೂಬ್ ನಗರ, ಟಿಪ್ಪು ನಗರ, ಇಲಾಹಿ ನಗರ, ಹುಣಸಿನಕೆರೆ ಬಡಾವಣೆ, ಶ್ರೀನಗರದಲ್ಲಿ ವಸತಿ ಸಂಕೀರ್ಣವನ್ನು ನಿರ್ಮಿಸಿದ್ದರೆ ಸ್ಲಂಗಳ ಚಿತ್ರಣವೇ ಬದಲಾಗುತ್ತಿತ್ತು. ಕನಿಷ್ಠ ವರ್ಷಕ್ಕೆ ಈ ಬಡಾವಣೆಗಳಲ್ಲಿ 100 ವಸತಿ ಸಂಕೀರ್ಣಗಳಾಗಿದ್ದರೂ ಆ ಭಾಗದ ನಿವಾಸಿಗಳ ಬದುಕು ಸುಧಾರಿಸುತ್ತಿತ್ತು. ಆದರೆ ವಸತಿ ಸಂಕೀರ್ಣ ಆಗಲೇ ಇಲ್ಲ. ಇಲ್ಲಿ ವಾಸಿಸುವವರ ಬದುಕು ಚಿಂತಾಜನಕವಾಗಿದೆ.

ಹೀಗೆ ಒಂದೇ ಎರಡೇ ! ಹತ್ತಾರು ಸಮಸ್ಯೆಗಳು ಇಲ್ಲಿವೆ. ಅದಕ್ಕೆ ಪರಿಹಾರ ಮಾತ್ರ ಸಿಕ್ಕಿಲ್ಲ. ಮುಂದೇನಾಗುತ್ತದೋ ಕಾದು ನೋಡೋಣ.

ನಗರದ ಎನ್.ಆರ್.ಸರ್ಕಲ್

ನಿಷ್ಠೆ, ಬದ್ಧತೆ ಇದ್ದಿದ್ದರೆ...

ನಿಷ್ಠೆ, ಬದ್ಧತೆ ಕೊರತೆ ಎದುರಾದರೆ ಸಮಸ್ಯೆಗಳು ಜೀವಂತವಾಗಿ ಉಳಿಯುತ್ತವೆ. ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ ನಿಷ್ಠೆ ಇದ್ದಿದ್ದರೆ ಯಾವ ಕೆಲಸವೂ ಸಲೀಸಾಗಿಯೇ ನಡೆಯುತ್ತದೆ ಅಲ್ಲವೇ? ಕಳೆದ ಹಲವಾರು ದಿವಸಗಳಿಂದಲೂ ಜನರ ಬೇಡಿಕೆಯಾಗಿಯೇ ಇರುವ ಕೆಲಸಗಳಿಗೆ ಮುಕ್ತಿ ಸಿಕ್ಕಿಲ್ಲವೆಂದರೆ ಏನು ಅರ್ಥ?

ರಾಜಕೀಯವಾಗಿ ಜಿಲ್ಲೆ ಗುರುತಿಸಿಕೊಂಡಿದೆ. ರಾಜ್ಯದಲ್ಲೇಕೆ, ರಾಷ್ಟ್ರದಲ್ಲೂ ಹೆಸರು ಪಡೆದಿದೆ. ಇದಕ್ಕೆ ಮತದಾರರ ಸೂಕ್ಷ್ಮ ಪ್ರಜ್ಞೆಯೂ ಕಾರಣ. ಆದರೆ ಇಲ್ಲಿ ಆಗುತ್ತಿರುವುದೇ ಬೇರೆ. ನಗರದಲ್ಲಿ ಯಾವ ಅಭಿವೃದ್ಧಿ ಕೆಲಸಗಳೂ ವೇಗ ಪಡೆದುಕೊಂಡಿಲ್ಲ.

ತಾಂತ್ರಿಕ ಕಾರಣ, ಆಡಳಿತಾತ್ಮಕದಲ್ಲಿ ಲೋಪ ಹೀಗೆ ವಿವಿಧ ಕಾರಣಗಳಿಂದಾಗಿ ಎಲ್ಲಾ ಕೆಲಸಗಳಿಗೂ ಹಿನ್ನಡೆಯಾಗಿದೆ. ಈ ಜಿಲ್ಲೆಯಲ್ಲಿ ಅತಿರಥ ಮಹಾರಥ ರಾಜಕಾರಣಿಗಳಿದ್ದಾರೆ. ಇನ್ನು ಏಳು ತಿಂಗಳು ಕಳೆದರೆ ವಿಧಾನಸಭೆ ಚುನಾವಣೆ ಎದುರಾಗುತ್ತದೆ ಅಲ್ಲವೇ? ನಮ್ಮ ಆಕಾಂಕ್ಷಿಗಳಿಗೆ ಪಕ್ಷದ ಟಿಕೆಟ್ ಪಡೆಯಲು ಒತ್ತಡ ಹೇರುತ್ತಿದ್ದಾರೆ. ಆದರೆ ಕೆಲಸದ ಬಗ್ಗೆ ಒತ್ತಡವನ್ನೇ ಹೇರುತ್ತಿಲ್ಲ.

ಯಾರೇನು ಕಡಿಮೆಯಿಲ್ಲ

ನಮ್ಮ ಜನಪ್ರತಿನಿಧಿಗಳು, ಜನನಾಯಕರು, ರಾಜಕೀಯ ಪಕ್ಷಗಳ ಮುಖಂಡರು ಯಾರು ಯಾರಿಗೇನೂ ಕಡಿಮೆಯಿಲ್ಲ. ಅಭಿವೃದ್ಧಿ ವಿಚಾರದಲ್ಲಿ ಅವರಿಗೆ ಬದ್ಧತೆ ಇದ್ದಂತೆ ಕಾಣುತ್ತಿಲ್ಲ.

ಜನರು ಕೇಳಿ ಕೇಳಿ ರೋಸಿ ಹೋಗಿದ್ದಾರೆ. ಪ್ರತಿನಿತ್ಯ ಪತ್ರಿಕೆಗಳಲ್ಲಿ ಇನ್ನೇನು ಕೆಲಸ ಮುಗಿದೇ ಹೋಯಿತು ಎಂದು ಹೇಳುತ್ತಲೇ ಇರುತ್ತಾರೆ. ಹಠಕ್ಕೆ ಬಿದ್ದವರಂತೆ ಮಾತನಾಡುತ್ತಾರೆ. ಕಾಂಗ್ರೆಸ್, ಬಿಜೆಪಿ ಹಾಗೂ ದಳ(ಎಸ್) ಮುಖಂಡರು ಇದರಲ್ಲಿ ಮುಂಚೂಣಿಯಲ್ಲಿದ್ದಾರೆ.

ನಮ್ಮ ದೌರ್ಭಾಗ್ಯ ನೋಡಿ! ಯಾವ ಕೆಲಸವೂ ಆಗಲಿಲ್ಲ. ಈ ಮುಖಂಡರು ಕೂಡ ಒಬ್ಬರಿಗೊಬ್ಬರು ಪರಸ್ಪರ ಕಾಲೆಳೆದು ಕಾಲಾಹರಣ ಮಾಡುತ್ತಲೇ ಇದ್ದಾರೆ. ರೈಲ್ವೆ ಮೇಲ್ಸೇತುವೆ, ರಿಂಗ್ ರಸ್ತೆ, ಆನೆ ಕಾರಿಡಾರ್, ವಸತಿ ಸಮುಚ್ಚಯ ಒಂದೇ ಎರಡೇ! ಗೊರೂರಿನಲ್ಲಿ ಕೆ.ಆರ್.ಎಸ್. ಮಾದರಿಯಲ್ಲಿ ಬೃಂದಾವನ ನಿರ್ಮಿಸುವುದಾಗಿ ಹೇಳಿದ್ದರು. ನಮ್ಮ ಸಂಸದ ಹೆಚ್.ಡಿ.ದೇವೇಗೌಡರು ಕೂಡ ಇದರಿಂದ ಹಿಂದೆ ಬೀಳಲಿಲ್ಲ. ತಾವು ಈ ಹಿಂದೆಯೇ ಈ ಕುರಿತು ಗಮನ ಸೆಳೆದಿದ್ದಾಗಿ ಹೇಳಿದ್ದರು. ಆದರೆ....?

ಅನಾಥ ಭಾವನೆ

ನಗರದ ನಾಗರಿಕರಿಗೆ, ಜಿಲ್ಲೆಯ ಜನತೆಗೆ ಅನಾಥ ಭಾವನೆ ಕಾಡುತ್ತಿದೆ. ಇಷ್ಟೆಲ್ಲಾ ಸಮಸ್ಯೆಗಳಿದ್ದರೂ, ಬಗೆಹರಿಯಲಿಲ್ಲ ಎಂದು ಪ್ರಶ್ನಿಸಿಕೊಳ್ಳುತ್ತಿದ್ದಾರೆ.

ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಇಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲ. ನಮ್ಮ ಹೋರಾಟಗಾರರು ಪ್ರಚಲಿತ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುತ್ತಾರೆ. ಜಿಲ್ಲಾಧಿಕಾರಿ ಕಚೇರಿ ಎದುರು ದಿನನಿತ್ಯ ಹೋರಾಟ, ಪ್ರತಿಭಟನೆ ನಡೆಯುತ್ತಲೇ ಇರುತ್ತವೆ. ಸಮಸ್ಯೆಗಳು ಮಾತ್ರ ಬಗೆಹರಿದಿಲ್ಲ.

ಹಿರಿಯ ನಾಗರಿಕರ ವೇದಿಕೆ ಚನ್ನಪಟ್ಟಣ ಕೆರೆ ಪುನಶ್ಚೇತನಕ್ಕೆ ಒತ್ತಡ ಹೇರಿದ್ದರೂ, ಜಿಲ್ಲಾಡಳಿತ ಅಥವಾ ಸರ್ಕಾರ ಗಮನ ಹರಿಸಿದಂತಿಲ್ಲ. ಇದಕ್ಕಿಂತ ಉದಾಹರಣೆ ಬೇರೆ ಬೇಕೇ? ಹಿರಿಯ ನಾಗರಿಕರ ವೇದಿಕೆ ಇನ್ನೆಷ್ಟು ದಿನ ಕಾಯಬೇಕು?

ಸಂಬಂಧವೇ ಇಲ್ಲದ ಸ್ಥಿತಿ

ಸರ್ಕಾರಕ್ಕೂ ಜನರಿಗೂ ಸಂಬಂಧವೇ ಇಲ್ಲದ ಸ್ಥಿತಿ ನಿರ್ಮಾಣವಾಗಿದೆ ಎಂದರೆ ನಂಬುತ್ತೀರಾ? ಹೌದು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರಿಗಾಗಿ ಸರ್ಕಾರಗಳು ಅಸ್ತಿತ್ವಕ್ಕೆ ಬರುತ್ತವೆ. ಜನರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಆದರೆ ಈಗ ಇದು ನಮ್ಮ ಸರ್ಕಾರವೇ ಎಂದು ಪ್ರಶ್ನಿಸಿಕೊಳ್ಳುವ ಕಾಲ ಬಂದಿದೆ.

ದಿನೇ ದಿನೇ ಸಂಬಂಧದ ಕೊಂಡಿ ಕ್ಷೀಣಿಸುತ್ತಾ ಸಾಗಿದೆ. ಈ ಬಗ್ಗೆ ಜನರು ಬೇಸರಪಟ್ಟುಕೊಂಡಿದ್ದಾರೆ. ಯಾವ ಕೆಲಸವೂ ನಿಗದಿತ ಅವಧಿಯಲ್ಲಿ ಆಗದಿರುವುದು ಅವರ ಅಸಮಾಧಾನಕ್ಕೆ ಕಾರಣವಾಗಿದೆ. ಪ್ರತಿಪಕ್ಷಗಳ ಬಗ್ಗೆಯೂ ಭಯಂಕರ ಕೋಪಗೊಂಡಿದ್ದಾರೆ.



“ರೈಲ್ವೆ ಮೇಲ್ಸೇತುವೆ, ರಿಂಗ್ ರಸ್ತೆ ಆಗಲೇಬೇಕು. ಮೇಲ್ಸೇತುವೆಗಾಗಿ ತುಂಬಾ ಹೋರಾಟಗಳನ್ನು ನಡೆಸಿದ್ದೇವೆ. ಆದರೆ ಅದು ಯಾವ ಹಂತದಲ್ಲಿದೆ ಎಂಬುದು ಗೊತ್ತಾಗುತ್ತಿಲ್ಲ. ಆಡಳಿತ ನಡೆಸುವವರಿಗೆ ದೂರದೃಷ್ಟಿ ಇಲ್ಲ.

-ಜಿ.ಎಲ್.ಮುದ್ದೇಗೌಡ, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ.

“ಕೆಲಸಗಳು ತುಂಬಾ ಬಾಕಿ ಇವೆ. ಆದರೆ ಗಮನ ಹರಿಸುತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ರಾಜಕೀಯ ಪಕ್ಷಗಳ ಮುಖಂಡರಿಗೆ ಪ್ರತಿಷ್ಠೆಗೇನೂ ಕಡಿಮೆ ಇಲ್ಲ. ಆದರೆ ಕೆಲಸಗಳು ಮಾತ್ರ ಸಾಗಲಿಲ್ಲ. ಇದಕ್ಕೆ ಎಲ್ಲರೂ ಕಾರಣ.

-ಡಾ॥ಸುರೇಶ್, ಅಧ್ಯಕ್ಷರು, ಐ.ಎಂ.ಎ., ಹಾಸನ.

“ಇವೆಲ್ಲಾ ಬಹಳ ಗಂಭೀರವಾದ ವಿಚಾರ. ರೈಲ್ವೆ ಮೇಲ್ಸೇತುವೆಗಾಗಿ ಜಿಲ್ಲೆಯ ಜನ ಒತ್ತಾಯಿಸಿದರು. ಆದರೆ ಅದಕ್ಕೆ ಕಾಲ ಕೂಡಿ ಬಂದಿಲ್ಲ. ಜನರಿಗೂ ಒಂದು ಸಹನೆ ಇದೆ. ತಕ್ಷಣವೇ ಮೇಲ್ಸೇತುವೆ ಕೈಗೆತ್ತಿಕೊಳ್ಳಲಿ.

-ಮಂಜುನಾಥ ಮೋರೆ, ಸಾಮಾಜಿಕ ಸೇವಾ ಕಾರ್ಯಕರ್ತ

“ನಗರದ ಹೊರವಲಯದಲ್ಲಿರುವ ರಿಂಗ್ ರಸ್ತೆ ಪೂರ್ಣವಾಗಲಿಲ್ಲ. 20 ವರ್ಷದಿಂದಲೂ ಬೇಡಿಕೆ ಇದೆ. ನಾವಂತೂ ರೋಸಿ ಹೋಗಿದ್ದೇವೆ. ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು, ಶಾಸಕ ಪ್ರಕಾಶ್ ಪರಿಶೀಲನೆ ನಡೆಸಿದ್ದಾರೆ. ಆದರೆ ಪ್ರಯೋಜನವಾಗಿಲ್ಲ.

-ಕುಮಾರ್, ಚಿಕ್ಕಕೊಂಡಗುಳ ನಿವಾಸಿ

“ಎ.ಪಿ.ಎಂ.ಸಿ. ಸಮೀಪ ಹಬೀಬಿಯಾ ಸಾಮಿಲ್ ಪಕ್ಕ ರಿಂಗ್ ರಸ್ತೆಯಾಗಿದ್ದರೆ ಬಹಳ ಅನುಕೂಲವಾಗುತ್ತಿತ್ತು. ಸುಗಮ ಸಂಚಾರಕ್ಕೆ ತೊಡಕಾಗುತ್ತಿರಲಿಲ್ಲ. ರೈಲ್ವೆ ಮೇಲ್ಸೇತುವೆಗೆ ಪ್ರಥಮ ಆದ್ಯತೆ ನೀಡಬೇಕು.

-ಮೊಹಮ್ಮದ್ ಸಾದಿಕ್, ಸಾಮಾಜಿಕ ಸೇವಾ ಕಾರ್ಯಕರ್ತ

ಆನೆ-ಮಾನವನ ನಡುವಿನ ಸಂಘರ್ಷ ನಿಂತಿಲ್ಲ

ಆಲೂರು-ಸಕಲೇಶಪುರ ತಾಲ್ಲೂಕಿನಲ್ಲಿ ಸಮಸ್ಯೆ ಮಾತ್ರ ಬಗೆಹರಿದಿಲ್ಲ. ಆನೆ ಕಾರಿಡಾರ್ ಪ್ರಸ್ತಾವನೆ ನೆನೆಗುದಿಗೆ ಬಿದ್ದಿದೆ ಎಂದು ಹೇಳಲೇಬೇಕು.

ಕಾರಿಡಾರ್ ಕುರಿತು ನೂರಾರು ಮೀಟಿಂಗ್‌ಗಳು ನಡೆದವು. ವಿಧಾನಸಭೆಯಲ್ಲಿಯೂ ಚರ್ಚೆಯಾಯಿತು. ಆನೆಗಳ ಉಪಟಳದಿಂದ ಬೆಳೆಗಾರರು ಹೈರಾಣಾಗಿ ಹೋಗಿದ್ದಾರೆ. ಆನೆಗಳಿಗೆ ನೆಲೆಯೇ ಇಲ್ಲ. ಅವುಗಳ ಜೀವಕ್ಕೆ ಸಂಚಕಾರ ಎದುರಾಗಿದೆ.

ಆನೆ ಕಾರಿಡಾರ್ ನಿರ್ಮಾಣವೇ ಇದಕ್ಕೆ ಪರಿಹಾರ ಎಂಬ ಒಕ್ಕೊರಲ ಅಭಿಪ್ರಾಯ ಇದ್ದರೂ ಅದೇಕೋ ಅತ್ತ ಗಂಭೀರವಾಗಿ ಚಿಂತಿಸಿಲ್ಲ. ಸಕಲೇಶಪುರ ತಾಲ್ಲೂಕಿನಲ್ಲಿ ಕಾರಿಡಾರ್‌ಗಾಗಿ ರೈತರೇ ಜಮೀನನ್ನು ಬಿಟ್ಟು ಕೊಡಲು ಮುಂದೆ ಬಂದಿದ್ದಾರೆ. ಆದರೆ ರೈತರ ಆರ್ತನಾದ ಕೇಳುವವರಾರು?

ಮಳೆಯಲ್ಲಿ ತೋಯ್ಯುತ್ತಾರೆ...ಬಿಸಿಲಲ್ಲಿ ಒಣಗುತ್ತಾರೆ....

ರೈತರು ಏನು ಪಾಪ ಮಾಡಿದ್ದಾರೆ? ರೈತರಿಗೊಂದು ನಗರದಲ್ಲಿ ಸುಸಜ್ಜಿತ ಮಾರುಕಟ್ಟೆಯೇ ಇಲ್ಲ. ಪ್ರತಿ ಮಂಗಳವಾರ ನಗರದ ಸುತ್ತಮುತ್ತ ಇರುವ ಗ್ರಾಮೀಣ ಪ್ರದೇಶದ ರೈತರು ತಾವು ಉತ್ತಿ ಬಿತ್ತಿ ಬೆಳೆದ ಬೆಳೆಯನ್ನು ಮಾರಾಟಕ್ಕೆ ತರುತ್ತಾರೆ. ಆದರೆ ಇಲ್ಲಿ ಮಾರುಕಟ್ಟೆ ವ್ಯವಸ್ಥೆ ಇದೆಯೇ?

ಸಂತೆಪೇಟೆಯಲ್ಲಿರುವ ದೊಡ್ಡ ಸಂತೆ ಅವ್ಯವಸ್ಥೆಯ ಆಗರವಾಗಿದೆ. ಸಾಲಗಾಮೆಯಲ್ಲಿ ನಡೆಯುವ ಸಂತೆ ಸ್ಥಳ ಇನ್ನೂ ಸುಧಾರಣೆ ಕಂಡಿಲ್ಲ. ರೈತರು ಮಳೆಯಲ್ಲಿ ತೋಯ್ಯುತ್ತಾರೆ. ಬಿಸಿಲಲ್ಲಿ ಒಣಗುತ್ತಾರೆ.

ಇನ್ನು ರೈಲ್ವೆ ನಿಲ್ದಾಣ ಬಳಿ ಇರುವ ಸಂತೆಯದ್ದೂ ಅದೇ ಕಥೆ. ಹತ್ತಾರು ಸಮಸ್ಯೆಗಳು ಇಲ್ಲಿವೆ. ಒಟ್ಟಾರೆ ಸುಸಜ್ಜಿತ ಮಾರುಕಟ್ಟೆ ಇಲ್ಲಿಲ್ಲ. ರೈತರು ಮಾರುಕಟ್ಟೆ ಇಲ್ಲದೆ ಚಡಪಡಿಸಿದರೆ ಗ್ರಾಹಕರು ಕೂಡ ಮತ್ತೊಂದು ರೀತಿಯಲ್ಲಿ ಚಡಪಡಿಸುತ್ತಾರೆ. ರಸ್ತೆಯ ಮಧ್ಯದಲ್ಲಿ ಮಾರಾಟಕ್ಕಿಡುವ ತರಕಾರಿ, ಅಗತ್ಯ ವಸ್ತುಗಳನ್ನು ಖರೀದಿಸುತ್ತಾರೆ. ಇಲ್ಲಿಯ ಕಸದೊಂದಿಗೆ ವಸ್ತುಗಳನ್ನೂ ಮನೆಗೆ ಕೊಂಡೊಯ್ಯುತ್ತಿರುವುದು ನಿಜ ಸ್ಥಿತಿ.

ಜ.15ರೊಳಗೆ ರೈತರ ಕಂದಾಯ ದಾಖಲೆಗಳು ದೋಷಮುಕ್ತ

ಹಾಸನ : ರೈತರ ಪರವಾಗಿ ಮುಂಬರುವ ಜನವರಿ 15ರೊಳಗಾಗಿ ಹಾಸನ ತಾಲ್ಲೂಕಿನಲ್ಲಿರುವ ಎಲ್ಲಾ ರೈತರ ಕಂದಾಯ ದಾಖಲೆಗಳು ದೋಷಮುಕ್ತವಾಗಬೇಕು ಎಂದು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಸೂಚನೆ ನೀಡಿದರು.

ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಕಂದಾಯ ಅದಾಲತ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪಹಣಿ ತಿದ್ದುಪಡಿ, ಹೆಸರು ತಿದ್ದುಪಡಿ, ಸರ್ವೆ ಸ್ಕೆಚ್‌ಗೆ ಸಂಬಂಧಿಸಿದ ಸಣ್ಣಪುಟ್ಟ ತಿದ್ದುಪಡಿಗಳನ್ನು ಇತ್ಯರ್ಥ ಮಾಡಿ ಜನರ ಪರವಾಗಿ ಕೆಲಸ ಕಾರ್ಯ ಮಾಡದಿದ್ದಲ್ಲಿ ಶಿಸ್ತು ಕ್ರಮ ಎದುರಿಸಬೇಕಾಗುವುದು ಎಂದು ಅಧಿಕಾರಿ ಸಿಬ್ಬಂದಿಗಳಿಗೆ ಎಚ್ಚರಿಕೆ ನೀಡಿದರು.

ಸರ್ಕಾರಿ ಜಮೀನು ರಕ್ಷಣೆ ಎಲ್ಲಾ ಅಧಿಕಾರಿ ಸಿಬ್ಬಂದಿ ಹೊಣೆ. ಅವುಗಳನ್ನು ಖಾತೆ ಮಾಡುವಾಗ ಎಚ್ಚರ ವಹಿಸಬೇಕು ಎಂದು ಬೇಲೂರು ಸರ್ಕಾರಿ ಶಾಲಾ ಜಾಗ ಒತ್ತುವರಿ ವಿಚಾರವನ್ನು ಉದಾಹರಣೆ ನೀಡಿ ನಿರ್ದೇಶನಗಳನ್ನು ನೀಡಿದರು.

ಉಪವಿಭಾಗಾಧಿಕಾರಿ ಡಾ:ಹೆಚ್.ಎಲ್. ನಾಗರಾಜ್ ಮಾತನಾಡಿ, ರೈತರ ಪರವಾಗಿ ದೂರದೃಷ್ಟಿ ಇಟ್ಟುಕೊಂಡು ಸ್ಥಳೀಯ ಮಟ್ಟದಲ್ಲಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ನಿಟ್ಟಿನಲ್ಲಿ ಗ್ರಾಮ ಲೆಕ್ಕಾಧಿಕಾರಿಗಳು, ಕಂದಾಯ ಇಲಾಖೆಯ ಅಧಿಕಾರಿಗಳು ರೈತರ ಪರವಾಗಿ ಕಾರ್ಯ ನಿರ್ವಹಿಸುವಂತೆ ತಿಳಿಸಿದರು.

ಭೂಮಿ, ಮೋಜಣಿ, ಪಿಂಚಣಿ ಮತ್ತಿತರ ವಿವರಗಳು ಮೊಬೈಲ್‌ನಲ್ಲಿ ದೊರೆಯುವಂತಾಗಬೇಕು. ಈ ನಿಟ್ಟಿನಲ್ಲಿ ಕಂದಾಯ ಇಲಾಖೆ ತಂತ್ರಾಂಶಗಳು ಜನಸಾಮಾನ್ಯರಿಗೆ ತಲುಪುವಂತೆ ಮಾಡಬೇಕು. ಆಗ ಕಂದಾಯ ಅದಾಲತ್‌ಗಳಿಗೆ ಬರುವ ಸಮಸ್ಯೆಗಳ ಪ್ರಮಾಣ ಕಡಿಮೆಯಾಗುತ್ತದೆ. ಗ್ರಾಮ ಪಂಚಾಯಿತಿ, ಹೋಬಳಿ ಮಟ್ಟದಲ್ಲಿ ಸಭೆಗಳನ್ನು ಮಾಡಿ ಅಲ್ಲಿ ಅಹವಾಲುಗಳನ್ನು ಬಗೆಹರಿಸಲು ಸಾಧ್ಯವಾಗದಿದ್ದಾಗ ಉಪವಿಭಾಗಾಧಿಕಾರಿಯವರ ಅಧ್ಯಕ್ಷತೆಯಲ್ಲಿ ತಿಂಗಳಿಗೊಮ್ಮೆ ಎಲ್ಲಾ ತಾಲ್ಲೂಕಿನಲ್ಲಿ ಅದಾಲತ್ ಮಾಡಿ ಎಂದು ತಿಳಿಸಿದರು.

ತಹಸೀಲ್ದಾರ್ ಶಿವಶಂಕರ್ ಮಾತನಾಡಿ, ತಾಲ್ಲೂಕಿನ ಕಂದಾಯ ಅದಾಲತ್‌ನ 347 ಕಡತಗಳನ್ನು ತಿದ್ದುಪಡಿ ಮಾಡಲು ಉಪ ವಿಭಾಗಾಧಿಕಾರಿಗಳು ನಿರ್ದೇಶನ ಮಾಡಿದ್ದಾರೆ ಹಾಗೂ 229 ಕಡತಗಳ ತಿದ್ದುಪಡಿಯನ್ನು ಉಪವಿಭಾಗಾಧಿಕಾರಿಗಳ ಹಂತದಲ್ಲಿ ಮಾಡಲಾಗುವುದು ಎಂದು ಹೇಳಿದರು.

ತಾಲ್ಲೂಕಿನ ಐದು ಕಸಬಾ, ಸಾಲಗಾಮೆ, ಕಟ್ಟಾಯ, ದುದ್ದ, ಶಾಂತಿಗ್ರಾಮ ಹೋಬಳಿಗಳ ರೈತರು ಕಂದಾಯ ಅದಾಲತ್‌ನಲ್ಲಿ ಪಾಲ್ಗೊಂಡಿದ್ದರು. ಪಹಣಿ ತಿದ್ದುಪಡಿ, ಹೆಸರು ತಿದ್ದುಪಡಿ, ವಿಧವಾ ವೇತನ, ವೃದ್ಧಾಪ್ಯ ವೇತನ ಹಾಗೂ ಪ್ರಕೃತಿ ವಿಕೋಪದಿಂದ ಹಾನಿಯಾದ ಪ್ರಕರಣಕ್ಕೆ ಪರಿಹಾರದ ಚೆಕ್ ವಿತರಿಸಲಾಯಿತು. ದುದ್ದ ಹೋಬಳಿಯ 16, ಕಸಬಾ ಹೋಬಳಿಯ 6, ಶಾಂತಿಗ್ರಾಮ 2, ಸಾಲಗಾಮೆ ಇಬ್ಬರು ಸೇರಿದಂತೆ ಒಟ್ಟು 26 ಫಲಾನುಭವಿಗಳಿಗೆ ಚೆಕ್ ವಿತರಣೆ ಹಾಗೂ ಸಂಧ್ಯಾ ಸುರಕ್ಷಾ ಯೋಜನೆ ಕಾರ್ಡ್ ವಿತರಿಸಲಾಯಿತು.

ಭೂ ದಾಖಲೆ ಸಹಾಯಕ ವಿರೂಪಾಕ್ಷ, ಜಿಲ್ಲಾ ಭೂಮಿ ಸಮಾಲೋಚಕ ಪ್ರದೀಪ್, ಶಿರಸ್ತೇದಾರ್ ವಿಕಾರ್ ಅಹಮ್ಮದ್, ಉಪ ತಹಸೀಲ್ದಾರ್ ಪ್ರಭಾಕರ್, ರಮೇಶ್, ನಾಗರಾಜ್, ಸಿಕಂದರ್. ರೆವಿನ್ಯೂ ಇನ್‌ಸ್ಪೆಕ್ಟರ್‌ಗಳಾದ ಬಿ.ಆರ್.ಕುಮಾರ್, ಯಶೋಧರ್, ವೆಂಕಟೇಶ್, ನಾಗರಾಜ್, ಗೋವಿಂದರಾಜ್, ರಾಜ್ಯ ನಿರೀಕ್ಷಕರು, ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ಮತ್ತಿತರರು ಹಾಜರಿದ್ದರು.

ಉತ್ತರ ಕ್ರಿಯಾರಾಧನೆಗೆ ಆಹ್ವಾನ

ಶ್ರೀಮತಿ ಯಶೋಧಮ್ಮ ಮತ್ತು ಶ್ರೀ ಎಂ.ಆರ್.ಲಿಂಗರಾಜು
ಹಾಗೂ ಸಹೋದರರು ಮಾಡುವ ವಿಜ್ಞಾಪನೆಗಳು

ಶ್ರೀಮತಿ ಶಾರದಮ್ಮನವರು
ಜನನ : 14-09-1933
ನಿಧನ :31-08-2017


ಶ್ರೀ.ಎಂ.ಎನ್.ರಂಗೇಗೌಡ
ಜನನ : 17-12-1929
ನಿಧನ :04-09-2017

ದಿನಾಂಕ 31-08-2017ನೇ ಗುರುವಾರ ನಮ್ಮ ಪೂಜ್ಯ ತಾಯಿಯವರಾದ **ಶ್ರೀಮತಿ ಶಾರದಮ್ಮನವರು**

ದಿನಾಂಕ 04-09-2017ನೇ ಸೋಮವಾರ ನಮ್ಮ ಪೂಜ್ಯ ತಂದೆಯವರಾದ **ಶ್ರೀ ಎಂ.ಎನ್.ರಂಗೇಗೌಡರು** ನಿ॥ಸ್ಕೂ॥ಮಾಸ್ಟರ್

ಇವರುಗಳು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ "**ಉತ್ತರಕ್ರಿಯಾದಿ**"ಯನ್ನು ದಿನಾಂಕ **15-09-2017ನೇ ಶುಕ್ರವಾರ ಮಧ್ಯಾಹ್ನ 12.00 ಗಂಟೆಗೆ ಮೃತರ ಸ್ವಗೃಹ ಜಿ.ಮೈಲ್ನಹಳ್ಳಿ ಗ್ರಾಮದಲ್ಲಿ** ನಡೆಸಲು ಗುರುಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಬಯಸಬೇಕಾಗಿ ಕೋರುವ,

ತಮ್ಮ ಆಗಮನಾಭಿಲಾಷಿಗಳು :
ಶ್ರೀ ಎಂ.ಆರ್.ಲಿಂಗರಾಜು ಮತ್ತು ಸಹೋದರರು
ಜಿ.ಮೈಲನಹಳ್ಳಿ.
ಮೊ:9880739020/9141627279

ಬಸ್ ವೇಳೆ : ಹಾಸನದಿಂದ ಜಿ.ಮೈಲ್ನಹಳ್ಳಿಗೆ
ಬೆಳಗ್ಗೆ:8-00ಕ್ಕೆ,10-30, ಮಧ್ಯಾಹ್ನ:2.30ಕ್ಕೆ

ವಿ.ಸೂ. : ಆಹ್ವಾನಪತ್ರಿಕೆ ತಲುಪದಿದ್ದವರು ಇದನ್ನೇ ಆಹ್ವಾನವೆಂದು ಪರಿಗಣಿಸಿ ಆಗಮಿಸಬೇಕಾಗಿ ವಿನಂತಿ.